
ಮನೆ ತಲುಪಿದೆ. ಮನೆಯ ಮನೆಯ ಮೂಲೆ ಮೂಲೆಯಲ್ಲಿಯೂ ಅಕ್ಕಂದಿರ ನರಳಾಟ, ಚೀರಾಟ ಕೇಳಿಸುತ್ತಿದೆ ಅನಿಸುತಿತ್ತು. ನನಗೊತ್ತಿರುವ ಸತ್ಯವನ್ನು ಹೆಂಡತಿ ಮಕ್ಕಳ ಜೊತೆ ಹಂಚಿಕೊಳ್ಳಲಾರದ ಸಂದಿಗ್ಧತೆ. ಕೊನೇಪಕ್ಷ ಇವರನ್ನಾದರೂ ಉಳಿಸಿ ಕೊಳ್ಳೋಣ ಅನ್ನಿಸಿ ಪತ್ನಿಯ ಬಳಿ 'ಸಾಮಾನೆಲ್ಲಾ ಪ್ಯಾಕ್ ಮಾಡು, ಈ ಊರು ನನಗೀಗ ಸರಿ ಬರುತ್ತಿಲ್ಲ, ನಾವು ನಾಳೆ ಬೆಂಗಳೂರಿಗೆ ಹಿಂದಿರುಗೋಣ' ಅಂದೆ. ಆಕೆ ಇವೆಲ್ಲಾ ಏನು ಎಂಬಂತೆ ನನ್ನತ್ತ ನೋಡಿದಳು. ನಾನು ಮುಖ ತಿರುಗಿಸಿ ಗೋಡೆಯ ಮೇಲಿದ್ದ ಅಪ್ಪನ ಫೋಟೋವನ್ನೊಮ್ಮೆ, ಅವ್ವನ ಫೋಟೋ ವನ್ನೊಮ್ಮೆ ನೋಡಿ ಕೈ ಮುಗಿದೆ.

ರಾತ್ರಿಯ ವಿಚಿತ್ರ ತಳಮಳ ಮುಗಿದು ಬೆಳಗಾಯ್ತು, ಇನ್ನೇನು ಎಲ್ಲಾ ತಯಾರಿ ಮುಗಿಸಿ ಹೊರಡಬೇಕು ಅನ್ನುವಷ್ಟರಲ್ಲಿ ಬಾಗಿಲು ಬಡಿದ ಸದ್ದಾಯಿತು, ಅದರ ಬೆನ್ನಹಿಂದೆಯೇ 'ದಫ್ ದಫ್' ಅಂತ ಬೂಟುಗಾಲುಗಳ ಸದ್ದೂ ಕೇಳಿಸಿತು. ನಾನು ಬಾಗಿಲ ಬಳಿ ತಲುಪುವ ಮುನ್ನವೇ ಕೋವಿಧಾರಿ ಯುವಕರ ಗುಂಪೊಂದು ಮನೆಯೊಳಗೆ ಪ್ರವೇಶಿಸಿ ಒಳಗಿನಿಂದ ಚಿಲಕ ಹಾಕಿಕೊಂಡರು. ಹೊರಗೆ ಮನೆಯ ಸುತ್ತಲೂ ಪೊಲೀಸರು. ಏನೊಂದೂ ಅರ್ಥವಾಗದ ಹೆಂಡತಿ ಮತ್ತು ನನ್ನಿಬ್ಬರು ಮಕ್ಕಳು ಅಲ್ಲೇ ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟರು. ಹೊರಗಿಂದ ಶರಣಾಗತಿಗೆ ಕರೆಕೊಡುತ್ತಿದ್ದರೆ, ಒಳಗಿಂದ ಗ್ರೆನೇಡ್ ಸಿಡಿಸುವ ಬೆದರಿಕೆ ಒಡ್ಡುತ್ತಿದ್ದರು. ಏನೂ ಮಾಡಲಾಗದ ಅಸಹಾಯಕತೆಯಲ್ಲಿ ನಾನು ಕೈ ಚೆಲ್ಲಿ ಕುಳಿತಿದ್ದೆ.

ಎರಡೂ ಕಡೆಗಳ ಅಹಂ ಗಳ ಮೇಲಾಟದಲ್ಲಿ ಮನುಷ್ಯತ್ವ ಇಂಚಿಂಚಾಗಿ ಸಾಯುತ್ತಿತ್ತು. ಆ ಕಡೆ ಇರುವವರು ಮೊದಲು ಫೈರಿಂಗ್ ಮಾಡಿದರೋ ಅಥವಾ ಈ ಕಡೆ ಇರುವವರೇ ಮಾಡಿದರೋ ನನಗೊತ್ತಿಲ್ಲ, ಆದ್ರೆ ಮಾನವೀಯತೆಯ ಬೇಟೆಗೆ ಎರಡೂ ಕಡೆಯವರು ಟೊಂಕ ಕಟ್ಟಿದ್ದರು. ಆ ಕಾಳಗದಲ್ಲಿ ನನ್ನವರು ಅನ್ನಿಸಿಕೊಂಡವರನ್ನೆಲ್ಲಾ ಕಳೆದುಕೊಂಡೆ. ಯಾವ ಊರಿಗೆ ನೆಮ್ಮದಿಯನ್ನು ಅರಸಿಕೊಂಡು ಹೋಗಿದ್ದೆನೋ ಅದೇ ಊರು ನನ್ನ ಸರ್ವಸ್ವವನ್ನೂ ನನ್ನಿಂದ ಕಿತ್ತುಕೊಂಡಿತ್ತು. ಅಲ್ಲಿ ಅದೆಷ್ಟು ಜೀವ ಧರೆಗುರುಳಿತೋ ಗೊತ್ತಿಲ್ಲ, ಅದೆಷ್ಟು ರಕ್ತ ನೆಲ ಸೇರಿತೋ ಗೊತ್ತಿಲ್ಲ. ಆದ್ರೆ ಇಡೀ ಮನೆಯಲ್ಲಿ ಜೀವ ಅಂತ ಉಳಿದುದು ನನ್ನದು ಮಾತ್ರ. ವಿಧಿಗೆ, ಕಾಲವೆಂಬ ಕಠೋರ ಹಣೆಬರಕ್ಕೆ ನನ್ನ ಮೇಲೆ ಅದೆಷ್ಟು ದಿನಗಳ ಸಿಟ್ಟಿತ್ತೋ ಏನೋ, ಅಕ್ಷರಶಃ ಜಮಖಾನೆಯ ಮೇಲೆ ನಡೆದುಬಂದಂತೆ ಶವಗಳನ್ನು ದಾಟಿ ಬಂದ ಪೊಲೀಸರು ನನಗೆ ನಕ್ಸಲನೆಂಬ ಹಣೆಪಟ್ಟಿ ಕಟ್ಟಿ ಕೈತೋಳ ತೊಡಿಸಿದರು.

ನಾನು ಏನೊಂದೂ ಮಾತಾಡದೆ ಅವರ ಹಿಂದೆ ಕುರಿಯಂತೆ ನಡೆದು ಹೋದೆ. ವಕೀಲರನ್ನು ನೇಮಿಸಿ ಹೋರಾಡುವ ಶಕ್ತಿಯಾಗಲಿ, ಚೈತನ್ಯವಾಗಲಿ ನನ್ನಲ್ಲಿ ಉಳಿದಿರಲಿಲ್ಲ. ಇಷ್ಟಕ್ಕೂ ನನ್ನವರೆಲ್ಲರನ್ನೂ ಕಳೆದುಕೊಂಡ ಮೇಲೆ ನಾನು ಯಾರಿಗಾಗಿ ಹೋರಾಡಬೇಕಿತ್ತು? ಯಾರಿಗಾಗಿ ಬದುಕಬೇಕಿತ್ತು? ಇವೆಲ್ಲವನ್ನೂ ಮೀರಿ ನಾನು ಸಮಾಜದ್ರೋಹಿ ಕೆಲಸ ಮಾಡಿಲ್ಲವೆಂದರೆ ಅದನ್ನು ನಂಬುವವರಾದರೂ ಯಾರಿದ್ದರು? ಎಲ್ಲಾ ಕಳೆದುಕೊಂಡು ಅಕ್ಷರಶಃ ಅನಾಥ ನಾದ ಮೇಲೆ ನನ್ನ ನಿರಪರಾಧಿತನವನ್ನು ಸಾಬೀತುಪಡಿಸಿ ನಾನು ಏನನ್ನು ಪಡಕೊಳ್ಳುವುದಿತ್ತು? ನಾನು ಮಾತಿದ್ದೂ ಮೂಗನಾದೆ. ಪೊಲೀಸರು ಕೊಡುತ್ತಿದ್ದ ಯಮಯಾತನೆಗಳನ್ನೆಲ್ಲಾ ಸುಮ್ಮನೆ ಸಹಿಸಿಕೊಳ್ಳುತ್ತಿದ್ದೆ. ಹೊರ ಪ್ರಪಂಚದಿಂದ ಸಂಪೂರ್ಣ ದೂರವೇ ಉಳಿದುಬಿಟ್ಟೆ. ನನ್ನವರು ಇಲ್ಲವೆಂದಾದ ಮೇಲೆ ನನ್ನ ಯಾರೂ ಬಿಡಿಸಿಕೊಂಡು ಹೋಗಲಾರರು ಅಂದುಕೊಂಡು ಒಂದು ರೀತಿಯಲ್ಲಿ ನೆಮ್ಮದಿಯಾಗಿಯೇ ಇದ್ದೆ. ಆದ್ರೆ ವಿಧಿಗೆಲ್ಲಿದೆ ದಯೆ? ಅದೇನು ಕಾರಣವೋ ಏನೋ ಗೊತ್ತಿಲ್ಲ, ಒಂದು ಬೆಳ್ಳಂಬೆಳಗ್ಗೆ ನನ್ನ ಜೈಲಿನಿಂದ ಬಿಡುಗಡೆ ಮಾಡಿದರು. ನಾನು ಮತ್ತೆ ಕುರಿಯಂತೆ ತಲೆತಗ್ಗಿಸಿ ಹೊರ ಪ್ರಪಂಚಕ್ಕೆ ಬಂದೆ. ಜೈಲಲ್ಲಿರುವಾಗ ಕನಿಷ್ಠಪಕ್ಷ ಊಟವಾದರೂ ನನಗೆ ದೊರಕುತ್ತಿತ್ತು. ಆದರೆ ಹೊರಗಡೆ ಅದಕ್ಕೂ ಸಂಚಾಕಾರ ಬಂದಿತ್ತು. ದುಡಿಯುವ ಆಸಕ್ತಿ, ಸಾಮರ್ಥ್ಯ ಎರಡೂ ನನ್ನಲಿರಲಿಲ್ಲ. ನಾನು ದುಡಿಯು ತ್ತೇನೆ ಅಂದರೂ ಒಂಟಿ ಕಾಲಿನ ಕುಂಟನಿಗೆ ಕೆಲಸ ಕೊಡುವವರಾರು? ಹಾಗೆಂದು ಭಿಕ್ಷೆ ಬೇಡಿ ತಿನ್ನುವುದು ನನ್ನ ಜಾಯಮಾನಕ್ಕೆ ಒಗ್ಗಲೇ ಇಲ್ಲ. ಹಾಗಾಗಿ ಅಲೆಯುತ್ತಾ ಅಲೆಯುತ್ತಾ ಇಲ್ಲಿ ಬಂದು ಈ ದೇವಸ್ಥಾನದಲ್ಲಿ ಭಕ್ತರು ಒಳಕ್ಕೆ ಬಿಟ್ಟು ಹೋದ ಚಪ್ಪಲಿ ಕಾಯುತ್ತಾ ಅವರು ಕೊಟ್ಟ ದುಡ್ಡನ್ನು ಪಡೆದು ಇರುವಷ್ಟು ದಿನ ಬದುಕುತ್ತೇನೆ. ಒಂದು ಹೊತ್ತಿನ ಊಟಕ್ಕೆ, ಒಂದು ಕಟ್ಟು ಬೀಡಿಗೆ ನನಗದು ಸಾಕಾಗುತ್ತದೆ. ಆದರೆ ಇಲ್ಲಿ ಬಂದು ಇಷ್ಟು ವರ್ಷವಾದ ಮೇಲೆ ಇದೇ ಮೊದಲ ಬಾರಿ ನಾನು ನನ್ನ ಕಥೆಯನ್ನು ಒಬ್ಬರ ಮುಂದೆ ಬಿಚ್ಚಿಟ್ಟಿದ್ದೇನೆ' ಅನ್ನುತ್ತಾ ಕಿವಿಯ ಮೇಲಿದ್ದ ಮೋಟು ಬೀಡಿ ತೆಗೆದು ಬೆಂಕಿ ಹಚ್ಚಿ ತುಟಿಗಿಟ್ಟುಕೊಂಡ.



ಕಥೆ ಸಿಕ್ಕ ಖುಷಿಯಲ್ಲಿ ಪೂಜಾ ಧಿಗ್ಗನೆ ಎದ್ದು ಬೇಗ ಬೇಗನೇ ಹೆಜ್ಜೆ ಹಾಕುತ್ತಾ ಮನೆ ತಲುಪಿ ಕಥೆ ಬರೆದು ಮೈಲ್ ಮಾಡಿ ಲ್ಯಾಪ್ ಟಾಪ್ ಮುಚ್ಚಿ ಒಂದು ನಿಡಿದಾದ ಉಸಿರು ಬಿಟ್ಟು ಸಂತೃಪ್ತಿಯಿಂದ ಕಣ್ಣು ಮುಚ್ಚಿದಳು.

ಹಿಂದಿನಿಂದ ಬಂದ ಅಮ್ಮ ಮೆಲ್ಲನೆ ತಲೆ ನೇವರಿಸುತ್ತಾ 'ಕಥೆಗೆ ವಿಷಯ ಸಿಕ್ತಾ ಮಗಳೇ?' ಎಂದು ಪ್ರಶ್ನಿಸಿದರು. ಪೂಜಾ 'ಕಥೆ ಬರೆದೂ ಆಯ್ತು, ಕಳುಹಿಸಿಯೂ ಆಯ್ತು' ಅಂದು ಮಂದಿರದಲ್ಲಿ ನಡೆದ ಘಟನೆಯನ್ನು ಸವಿಸ್ತಾರವಾಗಿ ತಿಳಿಸಿದಳು. ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡ ಅಮ್ಮ ತುಸು ಹೊತ್ತು ಸುಮ್ಮನೆ ಕೂತು, ಮತ್ತೆ ಅವಳನ್ನು 'ಸರಿ ಅವರಿಗೆ ನೀನೇನು ಕೊಟ್ಟೆ?' ಎಂದು ಪ್ರಶ್ನಿಸಿದರು.

ಪೂಜಾ 'ಇಲ್ಲಮ್ಮ, ಕಥೆ ಸಿಕ್ಕ ಖುಷಿಯಲ್ಲಿ ಅವನಿಗೇನಾದರೂ ಕೊಡಬೇಕು ಅನ್ನುವುದೇ ಮರೆತುಹೋಗಿತ್ತು, ಆದ್ರೆ ದಾರಿಯಲ್ಲಿ ಬರ್ತಾ ಬರಿಗಾಲಿಗೆ ಚುಚ್ಚಿದ ಮುಳ್ಳು ಚಪ್ಪಲಿ ಅಲ್ಲೇ ಬಿಟ್ಟು ಬಂದ ಸಂಗತಿಯನ್ನು ನೆನಪಿಸಿತು. ಹಿಂತಿರುಗಿ ಹೋದರೆ ಕಥೆ ಬರೆಯುವ ಈ ಅದ್ಭುತ ಮೂಡು ಹಾಳಾಗಬಹುದೆಂದು ನಿನ್ನೆಯಷ್ಟೇ ಖರೀದಿಸಿದ ಚಪ್ಪಲಿಯನ್ನೂ ನಾಳೆ ಸಿಕ್ಕೀತು ಅಂದುಕೊಂಡು ಮುಳ್ಳನ್ನೂ ಲೆಕ್ಕಿಸದೆ ಬಂದೆ. ಇನ್ನು ಇಂದೋ ನಾಳೆಯೋ ಸಾಯಬಹುದಾದ ಮುದುಕನಿಗೆ ಏನಾದರೂ ಕೊಡಬೇಕೆಂದು ಹಿಂದಿರುಗಿ ಹೋಗುವುದೆಲ್ಲಿಂದ ಬಂತು?' ಎಂದು ಮರು ಪ್ರಶ್ನಿಸಿದಳು.

ಅಮ್ಮ ತಟ್ಟನೆ ಕೈ ಕೊಡವಿ 'ನೀನೇನೋ ಅವರ ಬದುಕನ್ನು ಕಥೆಯಾಗಿಸಿ ಒಂದಿಷ್ಟು ಹೆಸರು ಸಂಪಾದಿಸುತ್ತಿ. ಆದ್ರೆ ಅದರಿಂದ ಅವರ ಬದುಕೇನೂ ಸುಧಾರಣೆಯಾಗುವುದಿಲ್ಲ. ಕಳೆದು ಹೋದ ಸಂಬಂಧಗಳೂ, ಜೀವಗಳೂ ಮತ್ತೆ ಅವರಿಗೆ ದೊರೆಯುವುದಿಲ್ಲ. ಇರಲಿ, ಅವನ್ನೆಲ್ಲಾ ಬಿಟ್ಬಿಡೋಣ. ಅವರ ಕಥೆಗಲ್ಲ, ಕನಿಷ್ಠ ಶ್ರಮಕ್ಕಾದರೂ ಮೌಲ್ಯ ಕಲ್ಪಿಸಬೇಕು ಎಂದು ನಿನಗನಿಸಲಿಲ್ಲ. ನಿನ್ನ ಕಥೆ ಬರೆಯುವ ಮೂಡ್ ಹಾಳಾಗಬಾರದೆಂದು, ಕಳೆದ ವರ್ಷವಷ್ಟೇ ಪಡೆದ ಪ್ರಶಸ್ತಿಯ ಪ್ರತಿಷ್ಠೆ ಮುಕ್ಕಾಗಬಾರದೆಂದು ಮತ್ತೆ ಹಿಂದಿರುಗಿ ಅವರತ್ತ ನೋಡದೆ ನಿಷ್ಕರುಣೆಯಿಂದ ಬಂದವಳು ನೀನು. ಮುಂದೆ ಯಾವತ್ತಾದರೂ ಒಂದಿನ ಸಂವೇದನೆ, ಸೂಕ್ಷ್ಮತೆ, ಅನುಭಾವಗಳ ಬಗ್ಗೆ ಬರೆಯುವಾಗೆಲ್ಲಾ ನಿನ್ನ ಆತ್ಮಸಾಕ್ಷಿಯಿಂದ ಎದ್ದು ಬಂದ ಅವೇ ಅಕ್ಷರಗಳು ಇವನ್ನೆಲ್ಲಾ ಬರೆಯುವ ಯೋಗ್ಯತೆ ನಿನಗೆಲ್ಲಿದೆ ಎಂದು ಪ್ರಶ್ನಿಸಿದರೆ ಆಗೇನು ಮಾಡುತ್ತಿ? ಬದುಕು ಒಂದು ಹಂತದಲ್ಲಿ ಯಾವುದೋ ಒಂದು ವಿಚಿತ್ರ ತಿರುವಿನಲ್ಲಿ ನಿನ್ನ ನಿಲ್ಲಿಸಿ ಭೂತದ ಅಷ್ಟೂ ಅಪರಾಧಗಳಿಗೆ, ಸ್ವಾರ್ಥಪರತೆಗೆ, ನಿಷ್ಕರುಣೀ ಮನಸತ್ವಕ್ಕೆ ಕಂದಾಯ ಕಟ್ಟಿಸುತ್ತದೆ. ಆಗೆಲ್ಲಾ ಬದುಕಿನ ಪ್ರಾಮಾಣಿಕ ಪ್ರಶ್ನೆಗಳಿಗೆ, ಸವಾಲುಗಳಿಗೆ ನೀನು ಸುಳ್ಳು ಸಮಜಾಯಿಷಿಗಳಿಲ್ಲದ ನೇರ ಉತ್ತರ ಕೊಡಲೇಬೇಕಾಗುತ್ತದೆ...' ಅಮ್ಮ ಹೇಳುತ್ತಲೇ ಇದ್ದರು.

ಅಮ್ಮನ ಅಂತಃಕರಣದ ಕುಲುಮೆಯಲ್ಲಿ ಕಥೆಗಾರ್ತಿಯ ಅಂತರಂಗ ನಿಧಾನವಾಗಿ ಕುದಿಯಲಾರಂಭಿಸಿತು. ಯಾವುದೋ ಟ್ರಾನ್ಸ್ ಗೊಳಗಾದಂತೆ ಎದ್ದ ಪೂಜಾ, ಅಮ್ಮನ ಕರೆಯನ್ನೂ ಮೀರಿ ಮತ್ತದೇ ದೇವಸ್ಥಾನದತ್ತ ಓಡಲಾರಂಭಿಸಿದಳು. ಈ ಬಾರಿ ಅವಳೊಳಗೆ ಯಾವ ಗೊಂದಲಗಳೂ ಇರಲಿಲ್ಲ. ಓಡಿ ಓಡಿ ದೇವಸ್ಥಾನ ತಲುಪಿದ ಪೂಜಾ, ಅದೇ ಚಪ್ಪಲಿ ಸ್ಟ್ಯಾಂಡ್ ಗಾಗಿ, ಮುದುಕನಿಗಾಗಿ ಅತ್ತ ಇತ್ತ ಕಣ್ಣಾಡಿಸಿದಳು. ಚಪ್ಪಲಿ ಕಾಯುವ ಮುದುಕ ಅಲ್ಲೇ ನೆಲದ ಮೇಲೆ ತಲೆ ಇಟ್ಟು ಮಲಗಿದ್ದ. ಅವನ ಬಾಯಿಯಿಂದ ಇಳಿದ ಜೊಲ್ಲು ನಿಧಾನವಾಗಿ ನೆಲ ಸೇರುತ್ತಿತ್ತು. ಯಾವ ಅಸಹ್ಯವೂ ಇಲ್ಲದೆ ಪೂಜಾ ತಾನು ಧರಿಸಿದ್ದ ಚೂಡಿದಾರ್ ನ ವೇಲ್‌ನಿಂದಲೇ ಅವನ ಜೊಲ್ಲೊರೆಸಿ, ತಲೆ ನೇವರಿಸುತ್ತಾ 'ತಾತಾ' ಎಂದು ಕರೆದಳು, ಅವನ ತಲೆ ಸುಮ್ಮನೆ ಹೊರಳಿ ಬಿತ್ತು. ಒಂದು ಹನಿ ನೀರು ಕಣ್ಣಿಂದ ಜಾರಿ ಬಿದ್ದು ಅವನ ಕೆನ್ನೆಯ ಮೇಲೆ ಹರಿದು ಅಲ್ಲೇ ಅನಾಥವಾಗಿ ಬಿದ್ದಿದ್ದ ಅವಳದೇ ಚಪ್ಪಲಿಯ ಮೇಲಿದ್ದ ಧೂಳಿನೊಳಗೆ ಇಂಗಿ ಹೋಯಿತು.